**<u>4ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಬೆಂಗಳೂರು</u>**

**ಸಿಸಿ ನಂ. 27987/2017 ಚಾಸಾಃ4 ಪ್ರಾಸಾಃ2**

| | | |
|---|---|---|
| ಸಾಕ್ಷಿದಾರರ ಹೆಸರು | : | ರಾಜಶೇಖರಯ್ಯ ಬಿ.ಸಿ. |
| ತಂದೆಯ ಹೆಸರು | : | ಚಂದ್ರಶೇಖರಯ್ಯ |
| ವಯಸ್ಸು | : | 44 ವರ್ಷ |
| ವೃತ್ತಿ | : | ಪಿ.ಐ. |
| ವಾಸ | : | ಬೈಯಂಡಹಳ್ಳಿ, ಬೆಂಗಳೂರು |

**<u>ಸಾಕ್ಷಿಯನ್ನು ದಿಃ 06.07.2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯವಿಚಾರಣೆ: ಪ್ರಾಜ್ಞಾ ಹಿ.ಸ.ಸ.ಅ ರವರಿಂದಃ-</u>**

ನಾನು ದಿಃ06.12.2012 ರಿಂದ 26.01.2018 ರವರೆಗೆ ಬಸವನಗುಡಿ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿಃ13.07.2016 ರಂದು ಮದ್ಯಾಹ್ನ 1.30 ಗಂಟೆಗೆ ಚಾಸಾ-1 ರವರು ನೀಡಿದ ಲಿಖಿತ ದೂರನ್ನು ಸ್ವೀಕರಿಸಿ ಠಾಣಾ ಅಪರಾದ ಕ್ರಮಾಂಕ 152/2016 ರಲ್ಲಿ ಪ್ರಕರಣ ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಗೆ ಸಲ್ಲಿಸಿರುತ್ತೇನೆ. ದೂರನ್ನು ಗುರ್ತಿಸುತ್ತೇನೆ. ದೂರನ್ನು ನಿಪಿ-15 ಎಂದು ಗುರ್ತಿಸಲಾಯಿತು. ಪ್ರ.ವ.ವರದಿಯನ್ನು ನೋಡಿ ಗುರ್ತಿಸುತ್ತೇನೆ. ಪ್ರ.ವ.ವರದಿಯನ್ನು ನಿಪಿ-16 ಎಂದು ಗುರ್ತಿಸಲಾಯಿತು. ನಿಪಿ-16 ರಲ್ಲಿರುವ ನನ್ನ ಸಹಿಯನ್ನು ಗುರ್ತಿಸುತ್ತೇನೆ. ಸಾಕ್ಷಿಯ ಸಹಿಯನ್ನು ನಿಪಿ-16ಎ ಎಂದು ಗುರ್ತಿಸುತ್ತೇನೆ. ದೂರುದಾರರು ಹಾಜರುಪಡಿಸಿದ 1ನೇ ಆರೋಪಿಯ ಹೆಸರಿನಲ್ಲಿರುವ ಆಕ್ಸಿಸ್ ಬ್ಯಾಂಕ್ ನ ಚೆಕ್ ಸಂ.024686 ಚೆಕ್ ನ ಜೆರಾಕ್ಸ್ ಪ್ರತಿ ಹಾಗೂ 1ನೇ ಆರೋಪಿಯ ಹೆಸರಿನಲ್ಲಿರುವ ಎಸ್ ಬ್ಯಾಂಕಿನ ಚೆಕ್ ಸಂ.000020 ಚೆಕ್ ನ ಜೆರಾಕ್ಸ್ ಪ್ರತಿಯನ್ನು, ರೂ.2 ಲಕ್ಷದ ವ್ಯವಹಾರದ ಇನ್ ವೆಸ್ಟ್ ಮೆಂಟ್ ಕಾಂಟ್ರಕ್ಟ್ ದಾಖಲೆಯ ಜೆರಾಕ್ಸ್ ಪ್ರತಿ ಹಾಗೂ ರೂ.2 ಲಕ್ಷದ ವ್ಯವಹಾರದ ಇನ್ ವೆಸ್ಟ್ ಮೆಂಟ್ ಕಾಂಟ್ರಕ್ಟ್ ದಾಖಲೆಯ ಜೆರಾಕ್ಸ್ ಪ್ರತಿ, ಫಾರಂ ಎಸ್.ಟಿ-1 ಜೆರಾಕ್ಸ್ ಪ್ರತಿ, 2ನೇ ಆರೋಪಿಯನ್ನು ನೇಮಕ

ಮಾಡಿಕೊಂಡ ಬಗ್ಗೆ ನ್ಯಾಷನಲ್ ಸ್ಟಾಕ್ ಎಕ್ಸ್ ಚೆಂಜ್ ಆಫ್ ಇಂಡಿಯಾ ಲಿ. ಕ್ಕೆ ಸಂಬಂಧಿಸಿದ ದಾಖಲೆಯ ಪ್ರತಿ, 2ನೇ ಆರೋಪಿ ಬಿ.ಇ. ಗ್ಲೋಬಲ್ ಕ್ಯಾಪಿಟಲ್ ಮಾರ್ಕೇಟ್ ಕಂಪನಿಯಲ್ಲಿ ಪಾಲುದಾರರು ಎಂದು ನೊಂದಣಿಯಾದ ಬಗ್ಗೆ ದಾಖಲೆಯ ಜೆರಾಕ್ಸ್ ಪ್ರತಿ, ಬ್ಲೂನಿಶು ಟ್ರೆಂಡ್ ಲಿಂಕ್ ನ ಸ್ಕಿಮ್ ನ ಬಗ್ಗೆ ಬ್ರೋಚರ್ ದಾಖಲೆಗಳನ್ನು ನನ್ನ ನಂಬಿಸುವುದುಕೋಸ್ಕರ ಕೊಟ್ಟಿದ್ದಾರೆ ಎಂದು ಹಾಜರುಪಡಿಸಿ ಆ ದಾಖಲೆಗಳನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

ದಿಃ13.07.2016 ರಂದು ಚಾಸಾ-1 ರವರು ತೋರಿಸಿಕೊಟ್ಟ ಕೃತ್ಯ ಸ್ಥಳದಲ್ಲಿ ಚಾಸಾ-2 ರವರ ಸಮಕ್ಷಮ ಮದ್ಯಾಹ್ನ 2.00 ರಿಂದ 3.00 ಗಂಟೆಯ ಸಮಯದಲ್ಲಿ ಮಹಜರು ಕ್ರಮವನ್ನು ಜರುಗಿಸಿರುತ್ತೇನೆ. ಮಹಜರನ್ನು ಗುರ್ತಿಸುತ್ತೇನೆ. ಅದನ್ನು ಈಗಾಗಲೇ ನಿಪಿ-17 ಎಂದು ಗುರ್ತಿಸಲಾಯಿತು. ನಿಪಿ-17 ರಲ್ಲಿರುವ ನನ್ನ ಸಹಿಯನ್ನು ನೋಡಿ ಗುರ್ತಿಸುತ್ತೇನೆ. ಆ ಸಹಿಯನ್ನು ನಿಪಿ-17ಎ ಎಂದು ಗುರ್ತಿಸಲಾಯಿತು. ದಿಃ16.07.2016 ರಂದು ದೂರುದಾರರಿಗೆ 91 ಸಿ.ಆರ್.ಪಿ.ಸಿ ಅಡಿಯಲ್ಲಿ ದಾಖಲೆಯನ್ನು ಹಾಜರುಪಡಿಸುವಂತೆ ನೊಟೀಸು ನೀಡಿರುತ್ತೇನೆ. ದಿಃ24.10.2016 ರ ಚಾಸಾ-1 ರವರು 1 ಮತ್ತು 2ನೇ ಆರೋಪಿತರು ನಿರ್ದೇಶಕರಾಗಿರುವ ಕಂಪನಿಯ ಪ್ರೊಫೈಲ್ ನ ಪ್ರತಿಯನ್ನು ಹಾಗೂ ವಿಸಿಟಿಂಗ್ ಕಾರ್ಡ್ ನ ಜೆರಾಕ್ಸ್ ಪ್ರತಿಯನ್ನು ಹಾಜರುಪಡಿಸಿರುತ್ತಾರೆ. ಅದರ ಜೊತೆಗೆ ದೂರುದಾರರ ಬ್ಯಾಂಕ್ ಪಾಸ್ ಬುಕ್ ನ ದೃಡೀಕೃತ ನಕಲನ್ನು ಹಾಜರುಪಡಿಸುತ್ತೇನೆ. ಅದನ್ನು ಗುರ್ತಿಸುತ್ತೇನೆ. ಬ್ಯಾಂಕ್ ಪಾಸ್ ಬುಕ್ ನ ದೃಡೀಕೃತ ನಕಲನ್ನು ನಿಪಿ-18 ಎಂದು ಗುರ್ತಿಸಲಾಯಿತು.

ಆಕ್ಸಿಸ್ ಬ್ಯಾಂಕ್ ನ ಚೆಕ್ ಸಂ.024686 ಚೆಕ್ ನ ಜೆರಾಕ್ಸ್ ಪ್ರತಿಯನ್ನು ಗುರ್ತಿಸುತ್ತೇನೆ. ಅದನ್ನು ನಿಪಿ-19 ಎಂದು ಗುರ್ತಿಸಲಾಯಿತು. 1ನೇ ಆರೋಪಿಯ ಹೆಸರಿನಲ್ಲಿರುವ ಎಸ್ ಬ್ಯಾಂಕಿನ ಚೆಕ್ ಸಂ.000020 ಚೆಕ್ ನ ಜೆರಾಕ್ಸ್ ಪ್ರತಿಯನ್ನು ಗುರ್ತಿಸುತ್ತೇನೆ. ಅದನ್ನು ನಿಪಿ-20 ಎಂದು ಗುರ್ತಿಸಲಾಯಿತು. ರೂ.2 ಲಕ್ಷದ ವ್ಯವಹಾರದ ಇನ್ ವೆಸ್ಟ್ ಮೆಂಟ್ ಕಾಂಟ್ರಕ್ಟ್ ದಾಖಲೆಯ ಜೆರಾಕ್ಸ್ ಪ್ರತಿಯನ್ನು ಗುರ್ತಿಸುತ್ತೇನೆ. ಅದನ್ನು ನಿಪಿ-21 ಎಂದು ಗುರ್ತಿಸಲಾಯಿತು. ಹಾಗೂ ರೂ.2 ಲಕ್ಷದ ವ್ಯವಹಾರದ ಇನ್ ವೆಸ್ಟ್ ಮೆಂಟ್ ಕಾಂಟ್ರಕ್ಟ್ ದಾಖಲೆಯ ಜೆರಾಕ್ಸ್ ಪ್ರತಿಯನ್ನು

ಗುರ್ತಿಸುತ್ತೇನೆ. ಅದನ್ನು ನಿಪಿ-22 ಎಂದು ಗುರ್ತಿಸಲಾಯಿತು. ಫಾರಂ ಎಸ್.ಟಿ-1 ಜೆರಾಕ್ಸ್ ಪ್ರತಿಯನ್ನು ಗುರ್ತಿಸುತ್ತೇನೆ. ಅದನ್ನು ನಿಪಿ-23 ಎಂದು ಗುರ್ತಿಸಲಾಯಿತು. 2ನೇ ಆರೋಪಿಯನ್ನು ನೇಮಕ ಮಾಡಿಕೊಂಡ ಬಗ್ಗೆ ನ್ಯಾಷನಲ್ ಸ್ಟಾಕ್ ಎಕ್ಸ್ ಚೆಂಜ್ ಆಫ್ ಇಂಡಿಯಾ ಲಿ. ಕ್ಕೆ ಸಂಬಂಧಿಸಿದ ದಾಖಲೆಯ ಪ್ರತಿಯನ್ನು ಗುರ್ತಿಸುತ್ತೇನೆ. ಅದನ್ನು ನಿಪಿ-24 ಎಂದು ಗುರ್ತಿಸಲಾಯಿತು. 2ನೇ ಆರೋಪಿ ಬಿ.ಇ. ಗ್ಲೋಬಲ್ ಕ್ಯಾಪಿಟಲ್ ಮಾರ್ಕೇಟ್ ಕಂಪನಿಯಲ್ಲಿ ಪಾಲುದಾರರು ಎಂದು ನೊಂದಣಿಯಾದ ಬಗ್ಗೆ ದಾಖಲೆಯ ಜೆರಾಕ್ಸ್ ಪ್ರತಿಯನ್ನು ಗುರ್ತಿಸುತ್ತೇನೆ. ಅದನ್ನು ನಿಪಿ-25 ಎಂದು ಗುರ್ತಿಸಲಾಯಿತು., ಬ್ಲೂನಿಶು ಟ್ರೆಂಡ್ ಲಿಂಕ್ ನ ಸ್ಕಿಮ್ ನ ಬಗ್ಗೆ ಬ್ರೋಚರ್ ದಾಖಲೆಯನ್ನು ಗುರ್ತಿಸುತ್ತೇನೆ. ಅದನ್ನು ನಿಪಿ-26 ಎಂದು ಗುರ್ತಿಸಲಾಯಿತು. ಕಂಪನಿಯ ಪ್ರೊಫೈಲ್ ನ ಪ್ರತಿಯನ್ನು ಗುರ್ತಿಸುತ್ತೇನೆ. ಅದನ್ನು ನಿಪಿ-27 ಎಂದು ಗುರ್ತಿಸಲಾಯಿತು. ಹಾಗೂ ವಿಸಿಟಿಂಗ್ ಕಾರ್ಡ್ ನ ಜೆರಾಕ್ಸ್ ಪ್ರತಿಯನ್ನು ಗುರ್ತಿಸುತ್ತೇನೆ. ಅದನ್ನು ನಿಪಿ-28 ಎಂದು ಗುರ್ತಿಸಲಾಯಿತು.

ದಿನಾಂಕಃ19.05.2017 ರಂದು ಚಾಸಾ-2 ರವರಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ. ದಿಃ26.05.2017 ರಂದು 2ನೇ ಆರೋಪಿಗೆ ನೋಟೀಸು ಜಾರಿ ಮಾಡಿ ಹೇಳಿಕೆ ದಾಖಲಿಸಿಕೊಂಡಿರುತ್ತೇನೆ. ದಿಃ26.06.2017 ರಂದು ತನಿಖೆಯನ್ನು ಪೂರ್ಣ ಗೊಳಿಸಿ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ. ನ್ಯಾಯಾಲಯದ ಮುಂದೆ ಇರುವ 2ನೇ ಆರೋಪಿಯನ್ನು ನೋಡಿ ಗುರ್ತಿಸುತ್ತೇನೆ.

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ.ಜೆ.ಬಿ. ವಕೀಲರಿಂದಃ</u>**

ಪ್ರಃದೂರುದಾರರು 1ನೇ ಆರೋಪಿಯ ಜೊತೆ ಮಾತುಕತೆ ಮಾಡಿಕೊಂಡು 1ನೇ ಆರೋಪಿ ಇಬ್ಬರು ದೂರುದಾರರಿಗೆ ಚೆಕ್ ಗಳನ್ನು ಕೊಟ್ಟಿದ್ದಾರೆ?

ಉಃ ದೂರುದಾರರು 1ನೇ ಆರೋಪಿಯ ಜೊತೆ ಮಾತುಕತೆ ಮಾಡಿಕೊಂಡಿರುವುದು ನನಗೆ ಗೊತ್ತಿಲ್ಲ. ಆದರೆ 1ನೇ ಆರೋಪಿ ದೂರುದಾರ-ರಾಮಚಂದ್ರಯ್ಯ ರವರಿಗೆ ಚೆಕ್ ಕೊಟ್ಟಿರುವುದು ನಿಜಇದೆ.

ಆ ಚೆಕ್ ಗಳ ಮೂಲ ಪ್ರತಿಯನ್ನು ನನಗೆ ಕೊಟ್ಟಿಲ್ಲ. ಆ ಚೆಕ್ ಅನ್ನು ದೂರುದಾರರು ಬ್ಯಾಂಕಿಗೆ ಹಾಜರುಪಡಿಸಿದ್ದು ಆ ಚೆಕ್ ಅಮಾನ್ಯಗೊಂಡಿದೆ ಎಂದು ನನಗೆ ಮಾಹಿತಿ ಇಲ್ಲ. ಆ ನಂತರ ದೂರುದಾರರು ಈ ಪ್ರಕರಣ ದಾಖಲಾಗುವ ಮೊದಲು ಚೆಕ್ ಬೌನ್ಸ್ ಪ್ರಕರಣ ದಾಖಲಿಸಿದ್ದಾರೆ ಎಂದು ನನಗೆ ಮಾಹಿತಿ ಇಲ್ಲ. ಆ ಚೆಕ್ ಪ್ರಕರಣ ದಾಖಲಿಸಿ ಹಲವಾರು ಸಮಯ ದೂರುದಾರರು ನ್ಯಾಯಾಲಯಕ್ಕೆ ಹೋಗದ ಕಾರಣ ಆ ಚೆಕ್ ಬೌನ್ಸ್ ಪ್ರಕರಣ ವಜಾ ಆಗಿದೆ ಎಂದರೆ ನನಗೆ ಮಾಹಿತಿ ಇಲ್ಲ. 1ನೇ ಆರೋಪಿಗೆ ಶಿಕ್ಷೆ ಆಗಿರುವುದನ್ನು ಹಾಗೂ ಸಿವಿಲ್ ವ್ಯಾಜ್ಯ ಇರುವುದನ್ನು ಮರೆಮಾಚಿ ಸುಳ್ಳು ದೂರು ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಆ ಚೆಕ್ ಬೌನ್ಸ್ ನ ವಿಚಾರ ನನಗೆ ಗೊತ್ತಿದ್ದರು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪ್ರಃಹಿಂದೆ ಚೆಕ್ ಬೌನ್ಸ್ ಪ್ರಕರಣ ದಾಖಲೆಗಳ ಬಗ್ಗೆ ತನಿಖೆ ಮಾಡಿದ್ದೀರಾ?

ಉಃ ನಾನು ತನಿಖೆಗೆ ಸಂಬಂಧಿಸಿದ ದಾಖಲೆಯನ್ನು ಹಾಜರುಪಡಿಸುವಂತೆ ದೂರುದಾರರಿಗೆ ನೊಟೀಸು ನೀಡಿದ್ದೇನೆ. ಅವರು ಹಾಜರುಪಡಿಸಿದ ದಾಖಲೆಗಳನ್ನು ಆಧರಿಸಿ ತನಿಖೆ ಮಾಡಿದ್ದೇನೆ.

ದೂರುದಾರರು ಚೆಕ್ ಬೌನ್ಸ ಪ್ರಕರಣಕ್ಕೆ ಸಂಬಂಧಿಸಿದ ದಾಖಲೆಗಳನ್ನು ಹಾಜರುಪಡಿಸಿದ್ದರೂ ಅದನ್ನು ಮುಚ್ಚಿಟ್ಟು ಆರೋಪಿತರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ದೂರುದಾರರು ನ್ಯಾಯಾಲಯಕ್ಕೆ ಹಾಜರುಪಡಿಸಿದ ಚೆಕ್ ಬೌನ್ಸ್ ಪ್ರಕರಣದ ದಾಖಲೆಗಳ ಬಗ್ಗೆ ನಾನು ತಿಳಿದುಕೊಂಡಿಲ್ಲ.

ನಿಪಿ-19 ರ ಚೆಕ್ ನ ಮೂಲ ಪ್ರತಿ ಇಲ್ಲದ ಕಾರಣ ಅದು ಅಸಲಿ ದಾಖಲೆ ಎಂದರೆ ಸಾಕ್ಷಿ ಮೂಲ ದಾಖಲೆಯನ್ನು ಹಾಜರುಪಡಿಸುವಂತೆ ದೂರುದಾರರಿಗೆ ಹೇಳಿದ್ದೇನೆ.

ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು)

**ಓ.ಹೇ.ಕೇ.ಸ.ಇದೆ**

**4ನೇ ಎ.ಸಿ.ಜೆ.ಎಂ.ನ್ಯಾ.,**